ಕರ್ನಾಟಕ ವಿಧಾನ ಸಭೆ

ಮಂಗಳವಾರ 15ನೇ ಜೂನ್ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11–10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣ)ರವರು

ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಹೈಕೋರ್ಟ್ ಪೀಠದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾವು ಬಹಳ ಸಾರಿ ಈ ಸದನದಲ್ಲಿ ಹೈಕೋರ್ಟ್ ಪೀಠ ಉತ್ತರ ಕರ್ನಾಟಕದ ಬಗ್ಗೆ ನಿರಂತರ ಒತ್ತಾಯವನ್ನು ಮಾಡಿದ್ದೇವೆ.

ಅಧ್ಯಕ್ಷರು : ಈಗೆ ಸಂತಾಪ ಸೂಚನೆ

ಶ್ರೀ ವಾಟಾಳ್ ನಾಗರಾಜ್ : ಆಯಿತು

2. ಸಂತಾಪ ಸೂಚನೆ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಂ.ಜಿ. ಜರತಾರಘರ ಅವರು ನಿಧನರಾಗಿರುವುದನ್ನು ವಿಷಾದದಿಂದ ಸದನಕ್ಕೆ ತಿಳಿಸಬಯಸುತ್ತೇನೆ.

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಜಿ. ಜರತಾರಘರ ಅವರು ದಿನಾಂಕ 10ನೇ ಜನವರಿ, 1920 ರಲ್ಲಿ ಹುಬ್ಬಳ್ಳಿಯಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾದ ಶ್ರೀಯುತರು ಪರಿಶಿಷ್ಟ/ ಪರಿಶಿಷ್ಟ ವರ್ಗಗಳ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಶ್ರಮಿಸಿದ್ದರು. 1945 ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ತುರ್ತು ಪರಿಸ್ಥಿತಿಯಲ್ಲಿ ಹಿಂಡಲಗಾ ಜೈಲಿನಲ್ಲಿ 3 ತಿಂಗಳ ಕಾಲ ಸೆರೆಮನೆ ವಾಸ ಅನುಭವಿಸಿದ್ದರು. ಜನ ಸಂಘದ ಅಧ್ಯಕ್ಷರಾಗಿ 1968 ರಿಂದ 1973 ರ ವರೆಗೆ ಹುಬ್ಬಳ್ಳಿ–ಧಾರವಾಡದಿಂದ ಎರಡು ಬಾರಿ ನಗರಸಭಾ ಸದಸ್ಯರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ ಶ್ರೀಯುತರು 1978 ರಲ್ಲಿ 6ನೇ ವಿಧಾನ ಸಭೆಗೆ ಜನತಾ ಪಕ್ಷದಿಂದ ಹಾಗೂ 1983 ರಲ್ಲಿ 7ನೇ ವಿಧಾನ ಸಭೆಗೆ ಬಿಜೆಪಿ ಪಕ್ಷದಿಂದ ಹುಬ್ಬಳ್ಳಿಯ (ಶಹರ) ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 11–06–2004 ರಂದು ನಿಧನ ಹೊಂದಿದರು.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ಶ್ರೀ ಎಂ.ಜಿ. ಜರತಾರಘರ್ ಅವರು ಈ ಸದನದ ಹಿರಿಯ ಸದಸ್ಯರಾಗಿದ್ದರು. ಮತ್ತು ಎರಡು ಸಲ ವಿಧಾನಸಭೆಗೆ ಹುಬ್ಬಳ್ಳಿ–ಧಾರವಾಡದಿಂದ ಆರಿಸಿ ಬಂದಿದ್ದರು. ಅವರು ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಕ್ಕೆ ಸಂಬಂಧಪಟ್ಟವರಾಗಿದ್ದು

ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಹುಬ್ಬಳ್ಳಿ-ಧಾರವಾಡ ನಗರದ ಅಲ್ಲಿಯ ಪಾಲಿಕೆಯ ಸದಸ್ಯರಾಗಿಯೂ ಕೂಡ ಕೆಲಸವನ್ನು ಮಾಡಿ ಸ್ಥಳೀಯ ಸಂಸ್ಥೆಗಳ ಸಮಸ್ಯೆಗಳ ಬಗ್ಗೆ ಕೂಡ ಒಂದು ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಹುಬ್ಬಳ್ಳಿ-ಧಾರವಾಡ ಶ್ರೀ ಜರತಾರಫರ್‌ರವರು ಹಿಂದುಳಿದ ವರ್ಗದ ನೇತಾರರಾಗಿ ಜನಸಾಮಾನ್ಯರಿಗೆ ಬಹಳಷ್ಟು ಕೂಡ ಕೆಲಸಕಾರ್ಯಗಳನ್ನು ಮಾಡತಕ್ಕ ರೀತಿಯಲ್ಲಿ ಒಬ್ಬ ಮೇಧಾವಿ ವ್ಯಕ್ತಿಯಾಗಿದ್ದರು. ಮತ್ತು ಒಬ್ಬ ಪ್ರಭಾವಿ ನೇತಾರರಾಗಿ ಕೂಡ ಅವರು ಕೆಲಸ ಮಾಡಿದ್ದಾರೆ. ಅವರ ಅಗಲಿಕೆಯಿಂದ ಹುಬ್ಬಳ್ಳಿ-ಧಾರವಾಡ ನಗರಕ್ಕೆ ಮತ್ತು ವಿಶೇಷವಾಗಿ ರಾಜ್ಯಕ್ಕೆ ಕೂಡ ನಷ್ಟವಾಗಿದೆ ಎನ್ನತಕ್ಕ ಮಾತನ್ನು ಹೇಳಿ ದಿವಂಗತರ ಕುಟುಂಬಕ್ಕೆ ಆ ದುಃಖವನ್ನು ಭರಿಸುವ ಶಕ್ತಿಯನ್ನು ಆ ದೇವರು ಅವರಿಗೆ ಕೊಡಲಿ ಹಾಗೂ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ದಿವಂಗತ ಎಂ.ಜಿ. ಜರತಾರಫರ್‌ರವರು 1978 ರಲ್ಲಿ ಮತ್ತು 1983 ರಲ್ಲಿ ಈ ಮನೆಯ ಸದಸ್ಯರಾಗಿದ್ದರು. ಜನಸಂಘದ ಕಾಲದಿಂದ ನಮ್ಮನ್ನೆಲ್ಲಾ ಬೆಳೆಸಿದಂಥವರು. ರಾಷ್ಟ್ರೀಯ ಸ್ವಯಂ ಸೇವಾ ಸಂಘ ನಮ್ಮ ಪರಿವಾರದಲ್ಲಿ ಬೆಳೆದು ಒಬ್ಬ ಆದರ್ಶ ವ್ಯಕ್ತಿಯಾಗಿ ತಮ್ಮ ಜೀವನವನ್ನು ನಡೆಸಿದರು. ಮೊನ್ನೆ 11-06-2004 ರಲ್ಲಿ ಅವರು ದೈವಾಧೀನರಾಗಿದ್ದಾರೆ. ನಾನು ಒಂದು ಒಂದು ಕಾಲು ತಿಂಗಳ ಹಿಂದೆ ಅವರ ಮನೆಗೆ ಹೋಗಿದ್ದಾಗ ಆ ಪರಿಸ್ಥಿತಿಯಲ್ಲೂ ಸಹಾ ರಾಜ್ಯದ ಆಗುಹೋಗುಗಳ ಬಗ್ಗೆ ದೇಶದ ಆಗುಹೋಗುಗಳ ಬಗ್ಗೆ ಮಾತನಾಡುವುದಕ್ಕೆ ಶಕ್ತಿ ಇಲ್ಲದಿದ್ದರೂ ಸಹಾ ಅದನ್ನು ತಿಳಿದುಕೊಳ್ಳುವಂಥ ಪ್ರಯತ್ನ ಮಾಡಿದರು. ನಾವು ಇಡೀ ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಸ್ಪರ್ಧೆ ಮಾಡಿದ್ದೇವೆ ಎಂದು ಹೇಳಿದಾಗ ನಮಗೆಲ್ಲಾ ಆಶೀರ್ವಾದವನ್ನು ಮಾಡಿ ಕಳುಹಿಸಿಕೊಟ್ಟಿದ್ದರು. ಬಹುಶಃ ನಮ್ಮ ಪಕ್ಷಕ್ಕೆ ಮಾತ್ರವಲ್ಲ, ಉತ್ತರ ಕರ್ನಾಟಕದ ಆ ಭಾಗದ ಜನತೆಗೆ ಬಹಳ ದೊಡ್ಡ ತುಂಬಲಾರದ ಒಂದು ನಷ್ಟವಾಗಿದೆ. ನಾವು ಅವರಿಗೆ ಶ್ರದ್ಧಾಂಜಲಿ ಒಪ್ಪಿಸುವುದು. ತಲುಪಿಸುವುದು ಎಂದರೆ ಅವರು ಯಾವ ರೀತಿ ಒಬ್ಬ ಆದರ್ಶ ವ್ಯಕ್ತಿಯಾಗಿ ಸಮಾಜದ ಕಡುಬಡವರ ಬಗ್ಗೆ ಹಿಂದುಳಿದವರ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡು ಕೊನೆಯ ದಿವಸದವರೆಗೆ ನಮ್ಮನ್ನೆಲ್ಲಾ ಬೆಳೆಸಿದರೋ ಅವರ ಆತ್ಮಕ್ಕೆ ಶಾಂತಿ ಸಿಗುವುದು ಆ ರೀತಿ ನಾವು ಪ್ರಾಮಾಣಿಕವಾಗಿ ಒಂದು ಕಡೆ ಇದ್ದು ಜನಗಳ ವಿಶ್ವಾಸವನ್ನು ಗಳಿಸಿ ಆ ತತ್ವ ನೀತಿ, ನಿಷ್ಠೆಗೆ ಬದ್ಧರಾಗಿದ್ದಾಗ ಮಾತ್ರ ಆ ರೀತಿ ಒಂದು ಶ್ರದ್ಧಾಂಜಲಿಯನ್ನು ಕೊಟ್ಟಿದ್ದಕ್ಕೆ ಸಾರ್ಥಕವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಪಿ.ಜಿ.ಆರ್ ಸಿಂಧ್ಯಾರವರು ಸಹಾ ಆ ಕಾಲದಲ್ಲಿ ಬಹಳ ಹತ್ತಿರದಿಂದ ಅವರನ್ನು ನೋಡಿದ್ದಾರೆ. ಅಂಥ ಹಿರಿಯ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ. ಈ ದುಃಖವನ್ನು

ತಡೆದುಕೊಳ್ಳುವ ಶಕ್ತಿ ಅವರ ಕುಟುಂಬಕ್ಕೆ ಭಗವಂತ ಕೊಡಲಿ ಎಂದು ಪ್ರಾರ್ಥನೆ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಅಧ್ಯಕ್ಷರು ತಂದಿರುವ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

†**ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು)** : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಎಂ.ಜಿ.ಜರತಾರಘರ ಅವರ ಸೇವೆ ಸಾರ್ವಜನಿಕ ಜೀವನದಲ್ಲಿ ಬಹಳ ದಿನಗಳ ಕಾಲ ಉತ್ತರ ಕರ್ನಾಟಕದಲ್ಲಿ ಉಳಿಯತಕ್ಕಂಥದ್ದು ಮಾನ್ಯ ಜರತಾರಘರ್‌ರವರು, ದಿವಂಗತ ಬಾಬ್‌ರಾವ್ ದೇಶ್‌ಪಾಂಡೆಯವರು ಇವರೆಲ್ಲರೂ ಸಹಿತ ಕರ್ನಾಟಕದಲ್ಲಿ ಒಂದು ತತ್ವನಿಷ್ಠ ರಾಜಕಾರಣಕ್ಕೋಸ್ಕರ ಎಂದು ಹೇಳಿ ದುಡಿದಿರತಕ್ಕಂಥವರು. ನಮ್ಮ ಹಿಂದಿನ ವಿರೋಧ ಪಕ್ಷದ ನಾಯಕರೂ ಮತ್ತು ಈಗಿನ ಸದಸ್ಯರೂ ಆಗಿರತಕ್ಕ ಮಾನ್ಯ ಜಗದೀಶ್ ಶೆಟ್ಟರ್‌ರವರ ತಂದೆಯವರು ಮಾನ್ಯ ಎಸ್.ಎಸ್. ಶೆಟ್ಟರ್‌ರವರು ಮತ್ತು ಮಾನ್ಯ ಜರತಾರಘರ್‌ರವರು ಬಹಳ ಒಳ್ಳೆಯ ಕೆಲಸವನ್ನು ಹುಬ್ಬಳ್ಳಿ ನಗರಕ್ಕೆ ಅನೇಕ ಜನಪರ ಹೋರಾಟಗಳಲ್ಲಿ ಭಾಗವಹಿಸಿದಂಥವರು. ವಿಶೇಷವಾಗಿ ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರವರು ಕರ್ನಾಟಕದಲ್ಲಿ ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ಅವರು ಅಂದೋಲನವನ್ನು ಮಾಡಿದ ಸಂದರ್ಭದಲ್ಲಿ ನಾವೆಲ್ಲಾ ಆಗಿನ್ನೂ ವಿದ್ಯಾರ್ಥಿ ದಿಸೆಯಲ್ಲಿದ್ದಂಥ ಯುವ ಮುಖಂಡರು. ನಮಗೆಲ್ಲಾ ಬಹಳ ಪ್ರೋತ್ಸಾಹವನ್ನು ಕೊಟ್ಟಂಥ ನಾಯಕರು ಮತ್ತೆ ತುರ್ತು ಪರಿಸ್ಥಿತಿಯಲ್ಲಿ ನಾನು ಹಿಂಡಲಗ ಜೈಲಿನಲ್ಲಿದ್ದಾಗ ಅವರೂ ಸಹಿತ ಕೆಲವು ತಿಂಗಳುಗಳ ಕಾಲ ನಮ್ಮ ಜೊತೆಯಲ್ಲಿದ್ದರು. ವೈಯಕ್ತಿಕವಾಗಿ ಬಹಳ ಒಳ್ಳೆಯ ಮನುಷ್ಯರು. ಸಾರ್ವಜನಿಕ ಬದುಕಿನಲ್ಲಿ ಸ್ವಚ್ಛತೆ ಇರಬೇಕೆಂದು ಹೇಳಿ ಅವರ ಆ ಜೀವನದ ಕೊನೆಯ ಉಸಿರು ಇರುವತನಕ ಹೋರಾಟ ಮಾಡಿರತಕ್ಕ ಒಬ್ಬ ಧೀಮಂತ ನಾಯಕರು. ಎಲ್ಲಾ ವರ್ಗದ ಜನಗಳ ಬಗ್ಗೆ ಅಭಿಮಾನ ಇಟ್ಟುಕೊಂಡಿರತಕ್ಕ ಒಬ್ಬ ಮುಖಂಡರು. ಅವರ ಸಾವಿನಿಂದ ಹುಬ್ಬಳ್ಳಿ ನಗರಕ್ಕೆ ಆ ಭಾಗದ ಜನಗಳಿಗೆ ಬಹಳ ನಷ್ಟವುಂಟಾಗಿದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳಿ ಈ ಸದನದ ಸದಸ್ಯರಾಗಿ 1978 ರಲ್ಲಿ ನಮ್ಮ ಜನತಾ ಪಾರ್ಟಿಯಿಂದ ಮತ್ತೆ 1983 ರಲ್ಲಿ ಭಾರತೀಯ ಜನತಾ ಪಾರ್ಟಿಯಿಂದ ಗೆದ್ದು ನಾವು ಆಗ ಮಾನ್ಯ ಹೆಗಡೆಯವರ ಸಹಕಾರದಲ್ಲಿ ಸರ್ಕಾರವನ್ನು ರಚನೆ ಮಾಡಿದಾಗ ನಮಗೆ ಸಹಕಾರವನ್ನು ಸಹಿತ ಕೊಟ್ಟಿದ್ದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ ಮತ್ತು ತಾವು ಮಂಡಿಸಿರುವ ಸಂತಾಪ ಸೂಚನೆಗೆ ಸಂಪೂರ್ಣವಾದ ಬೆಂಬಲವನ್ನು ಸೂಚಿಸಿ ನನಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಇದಕ್ಕೆ ಧನ್ಯವಾದಗಳು.

†**ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)** : ಮಾನ್ಯ ಸಭಾಧ್ಯಕ್ಷರೇ, ಮನೆಯ ಸದಸ್ಯರಾಗಿದ್ದಂಥ ಶ್ರೀ ಎಂ.ಜಿ. ಜರತಾರಘರ್‌ರವರು ಇತ್ತೀಚೆಗೆ 11–06–2004ರಲ್ಲಿ ನಿಧನರಾಗಿದ್ದಾರೆ. ಇವರು ಕೃಷಿಕ ಸಮಾಜದಲ್ಲಿ ಹುಟ್ಟಿದ್ದರೂ

ಕೂಡ ತಮ್ಮನ್ನು ಸಾರ್ವಜನಿಕ ಜೀವನಕ್ಕೆ ತೊಡಗಿಸಿಕೊಂಡು ಆರ್‌ಎಸ್‌ಎಸ್ ನಲ್ಲಿ ಸೇರಿ ಬಹಳ ದೀರ್ಘಕಾಲ ಅಲ್ಲಿ ಸಕ್ರಿಯವಾಗಿ ಕೆಲಸಮಾಡಿದ್ದಾರೆ. ಜನತಾ ಪಾರ್ಟಿ ಆದ ಮೇಲೆ 1977, ಆಗ 1978ರಲ್ಲಿ ಜನತಾಪಾರ್ಟಿಯ ಶಾಸಕರಾಗಿದ್ದರು. ಆಮೇಲೆ 1983ರಲ್ಲಿ ಜನತಾ ಪಕ್ಷ ವಿಭಜನೆ ಆದ ಮೇಲೆ ಬಿಜೆಪಿ ಆದಮೇಲೆ ಬಿಜೆಪಿ ಶಾಸಕರಾಗಿ 1983ರಲ್ಲಿ ಆದರು. ನಾವು ಹೊಸದಾಗಿ ಆಗ ಇಲ್ಲಿ ಶಾಸಕರಾಗಿ 1983ರಲಿ ಬಂದಾಗ ಅವರು ಆ ಕಡೆ ಬಿಜೆಪಿಯಿಂದ ಶಾಸಕರಾಗಿದ್ದರು. ವಿಧಾನಸಭೆಯ ಕಲಾಪಗಳಲ್ಲಿ ಬಹಳ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಹುಬ್ಬಳ್ಳಿ ಭಾಗದಲ್ಲಿ ಬಾಬುರಾವ್ ದೇಶಪಾಂಡೆಯವರು ಮತ್ತು ಜರತಾರಘರ್ ಅವರು ಬಹಳ ಪ್ರಬಲವಾದಂತಹ ನಾಯಕರಾಗಿದ್ದರು. ಕಾಂಗ್ರೆಸ್‌ಗೆ ಒಂದು ವಿರುದ್ಧವಾದಂತಹ ರಾಜಕಾರಣವನ್ನು ಬೆಳೆಸುವುದರಲ್ಲಿ ತಮ್ಮದೇ ಆದಂತಹ ಪಾತ್ರವನ್ನು ಅವರು ವಹಿಸಿದ್ದರು. ಮತ್ತೆ ತುರ್ತು ಪರಿಸ್ಥಿತಿಯನ್ನು ವಿರೋಧ ಮಾಡಿ ಜೈಲುವಾಸವನ್ನೂ ಸಹ ಅನುಭವಿಸಿದ್ದರು. ಮತ್ತು ಅವರು ಶಾಸಕರಾಗಿದ್ದಾಗ ರೈತರು, ಬಡವರು, ದಲಿತರು, ಹಿಂದುಳಿದವರ ಬಗ್ಗೆ ಅಪಾರವಾದಂತಹ ಕಾಳಜಿಯನ್ನು ಇಟ್ಟುಕೊಂಡು ಅವರ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನವನ್ನು ಪಟ್ಟರು ಎಂದು ಹೇಳಿ ಇವತ್ತು ನಾವು ನೆನೆದುಕೊಳ್ಳಬೇಕಾಗಿದೆ. ಅವರು ಭಾರತೀಯ ಜನತಾ ಪಕ್ಷದಲ್ಲಿದ್ದರೂ ಕೂಡ ಸಾಮಾಜಿಕ ನ್ಯಾಯರ ಪರವಾಗಿದ್ದರು ಎನ್ನತಕ್ಕದ್ದನ್ನು ಇವತ್ತು ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅಂತಹ ಒಬ್ಬ ವ್ಯಕ್ತಿ ತುಂಬು ಜೀವನವನ್ನು ಮಾಡಿದ್ದಾರೆ. ಸುಮಾರು 84 ವರ್ಷಗಳ ತುಂಬು ಜೀವನ ಮಾಡಿ ಇವತ್ತು ನಮ್ಮನ್ನು ಅವರು ಅಗಲಿದ್ದಾರೆ. ಇವತ್ತು ಅವರ ಅಗಲಿಕೆಯಿಂದ ಉತ್ತರ ಕರ್ನಾಟಕ ಅಷ್ಟೇ ಅಲ್ಲ, ಇಡೀ ರಾಜ್ಯಕ್ಕೆ ನಷ್ಟವಾಗಿದೆ ಎಂದು ಹೇಳಿ ನಾನು ಭಾವಿಸಿಕೊಳ್ಳುತ್ತೇನೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಕೋರಿಕೊಂಡು ಮತ್ತು ಅವರ ಕುಟುಂಬದ ಎಲ್ಲಾ ಸದಸ್ಯರಿಗೆ ಅವರ ಸಾವಿನಿಂದ ಊಂಟಾದ ನೋವಿನ ದುಃಖವನ್ನು ಭರಿಸತಕ್ಕ ಶಕ್ತಿ ಬರಲಿ ಎಂದು ಹೇಳಿ ನಾನು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ತಾವೇನು ಸಂತಾಪ ಸೂಚನೆಯನ್ನು ಮಂಡನೆ ಮಂಡಿಸಿದ್ದೀರಿ, ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ, ಶ್ರೀ ಎಂ.ಜಿ. ಜರತಾರಘರ ಅವರು ಒಬ್ಬ ನಿಷ್ಟಾವಂತ ಮತ್ತು ಪ್ರಾಮಾಣಿಕ ಜನಸೇವಕರಾಗಿ ಕೆಲಸಮಾಡಿದಂತಹವರು. 1978 ಮತ್ತು 1983 ಈ ಎರಡು ಅವಧಿಯಲ್ಲಿ ಈ ಒಂದು ಶಾಸನ ಸಭೆಯ ಸದಸ್ಯರಾಗಿ ಪ್ರಾಮಾಣಿಕವಾದಂತಹ ಸೇವೆಯನ್ನು ಹುಬ್ಬಳ್ಳಿ–ಧಾರವಾಡ ಮಹಾನಗರಕ್ಕೆ ಮತ್ತು ಆ ಭಾಗದ ಜನತೆಗೆ ಮಾಡಿದ್ದನ್ನು ನಾವು ಇಲ್ಲಿ ನೆನೆಪಿಸಿಕೊಳ್ಳಬೇಕಾಗಿದೆ. ಅವರು ಶಾಸಕರು ಆಗುವ ಮುಂಚೆ ಮಹಾನಗರ ಸಭೆಯ ಸದಸ್ಯರಾಗಿದ್ದರು. ಮೂರು ಸಲ ಆಯ್ಕೆ ಆಗಿದ್ದರು. ನಮ್ಮ ತಂದೆಯವರಾದಂತಹ ಶ್ರೀ ಎಸ್.ಎಸ್. ಶೆಟ್ಟರ್ ಅವರು ಮತ್ತು ಅವರು ಒಂದೇ ವಾರ್ಡ್‌ನಿಂದ ಮೂರು ಬಾರಿ ಸತತವಾಗಿ

ಆರಿಸಿ ಬಂದಂಥವರು. ಅಂದರೆ ಅವಾಗ ಒಂದೇ ವಾರ್ಡ್‌ನಲ್ಲಿ ಮೂರು ಸೀಟು ಇರುವಂತಹ ವಾರ್ಡ್ ಇತ್ತು. ಮಲ್ಟಿ ಮೆಂಬರ್, ಅಂತಹವರಲ್ಲಿ ನಮ್ಮ ತಂದೆಯವರು ಮತ್ತು ಅವರು ಪ್ರತಿ ಸಲ ಎಲೆಕ್ಷನ್‌ನಲ್ಲಿ ನಿಂತು ಸತತವಾಗಿ ಮೂರು ಸಲ ಆಯ್ಕೆ ಆಗಿ ಬಂದಂತಹವರು. ನಮ್ಮ ತಂದೆಯವರು ಮಹಾಪೌರರು ಆದಂತಹ ಸಂದರ್ಭದಲ್ಲಿ ಅದಕ್ಕೆ ಸಂಪೂರ್ಣವಾದಂತಹ ಸಹಕಾರ ಮತ್ತು ಒತ್ತನ್ನು ಕೊಟ್ಟಿದ್ದರಿಂದ ನಮ್ಮ ತಂದೆಯವರು ಮಹಾಪೌರರಾಗಿ ಸೇವೆ ಸಲ್ಲಿಸಲು ಅನುಕೂಲ. ಆಯಿತು. ಮತ್ತು ನಾನು ಇಲ್ಲಿ ಇನ್ನೊಂದು ವಿಚಾರವನ್ನು ಮಹದೇಶ ಜರತಾರಘರ ಅವರ ಬಗ್ಗೆ ಹೇಳಬೇಕಾಗುತ್ತದೆ. ಭಾರತೀಯ ಜನತಾ ಪಕ್ಷ ದೊಡ್ಡ ಶಕ್ತಿಯಾಗಿ ಬೆಳೆದಿದೆ. ಆದರೆ ಹಿಂದೆ ಜನಸಂಘ ಇತ್ತು. ಜನಸಂಘದ ಪ್ರಭಾವ ಕೆಲವೊಂದು ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿತ್ತು. 1952ರಲ್ಲಿ ಜನಸಂಘ ಸ್ಥಾಪನೆ ಅದಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿ 1952ರಿಂದಲೂ ಪಕ್ಷದಲ್ಲಿ ಇದ್ದಂತಹ, ಕೆಲವೇ ಕೆಲವು ವ್ಯಕ್ತಿಗಳಲ್ಲಿ ಮಹದೇಶ ಜರತಾರಘರ ಅವರೂ ಒಬ್ಬರು. ಅವಾಗ ಪಕ್ಷದ ಆದೇಶದ ಪ್ರಕಾರ, ನಾವೇನು ಇವತ್ತು ಗೆಲ್ಲುತ್ತೇವೆ ಎಂದು ಹೇಳಿ ಸೀಟು ಕೇಳುವುದಕ್ಕೆ ಸ್ಪರ್ಧೆ ಇದೆ. ಆದರೆ ಆ ಸಂದರ್ಭದಲ್ಲಿ ಜನಸಂಘದಿಂದ ಸ್ಪರ್ಧೆ ಮಾಡಲಿಕ್ಕೆ ಯಾರೂ ಮುಂದೆ ಬರುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಪಕ್ಷದ ಆದೇಶದ ಪ್ರಕಾರ 1952ರಿಂದಲೇ ಬಹುಶಃ 4–5 ಚುನಾವಣೆಯಲ್ಲಿ ಅವರು ಶಾಸನ ಸಭೆಗೆ ನಿಂತರು. ನಿಂತು ಡಿಪಾಸಿಟ್ ಅನ್ನೂ ಕಳೆದುಕೊಂಡರು, ಅದರೂ ಅಧೈರ್ಯಗೊಳ್ಳಲಿಲ್ಲ. ಪಕ್ಷವನ್ನು ಕಟ್ಟುವಂತಹ ಕೆಲಸವನ್ನು ಮಾಡಿದರು. ಆ ರೀತಿ ಇವತ್ತು ಪಕ್ಷವನ್ನು 1952ರಿಂದ ಕಟ್ಟಿದವರಲ್ಲಿ ಮಹದೇಶ ಜರತಾರಘರ ಅವರೂ ಒಬ್ಬರು. ಹೀಗಾಗಿ ಅವರು ಕೇವಲ ಜನಸಂಘ, ಕೇವಲ ಭಾರತೀಯ ಜನತಾಪಾರ್ಟಿಗೆ ಅಷ್ಟೇ ಅಲ್ಲ. ಜಯಪ್ರಕಾಶ್ ನಾರಾಯಣ್ ಅವರ ಸಾಮಾಜಿಕ ಕ್ರಾಂತಿ, 1972ರಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟ ಮತ್ತು ಜಯಪ್ರಕಾಶ್ ನಾರಾಯಣ್ ಅವರ ಸಂಪೂರ್ಣ ಕ್ರಾಂತಿಯ ಅಂಧೋಳನದಲ್ಲಿ ಸಕ್ರಿಯವಾಗಿ ಭಾಗವಹಿಸದಂತಹವರಲ್ಲಿ ಮಹದೇಶ ಜರತಾರಘರ ಅವರೂ ಒಬ್ಬರು ಮತ್ತು ಅನೇಕ ಸಂದರ್ಭದಲ್ಲಿ ತುರ್ತು ಪರಿಸ್ಥಿತಿಯಲ್ಲಿ ಜೈಲು ವಾಸವನ್ನೂ ಅವರು ಅನುಭವಿಸಿದ್ದರು. ಹೀಗಾಗಿ ಇವತ್ತು ಒಬ್ಬ ಆದರ್ಶ ವ್ಯಕ್ತಿ ನಮ್ಮ ಜೊತೆಯಲ್ಲಿ ಇಲ್ಲ. 85 ವರ್ಷಗಳಷ್ಟು ದೀರ್ಘ ಕಾಲ ಅವರು ಬದುಕಿ ತಮ್ಮ ಒಂದು ಪ್ರಾಮಾಣಿಕತನವನ್ನು ನಮ್ಮೆಲ್ಲಾ ಕಾರ್ಯಕರ್ತರಲ್ಲಿ, ಜನ ಮಾನಸದಲ್ಲಿ ಬಿತ್ತಿ ಹೋಗಿದ್ದಾರೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ ಮತ್ತು ಇನ್ನೊಂದು ಪ್ರಮುಖವಾಗಿ ಒಂದು ಅಂಶವನ್ನು ನಾನು ಹೇಳುವಂಥದ್ದು. ಶಾಸಕರಾಗಿ ಅವಧಿ ಮುಗಿದ ಮೇಲೆ ಅವರಿಗೆ ಏನು ಪೆನ್‌ಷನ್ ಹಣ ಬರುತ್ತಿತ್ತು. ಶಾಸಕರ ಪಿಂಚಣಿ ಹಣದಲ್ಲಿ ಒಂದು ಪೈಸೆಯನೂ ಅವರು ತಮ್ಮ ಕಡೆಯಲ್ಲಿ ಇಟ್ಟುಕೊಳ್ಳಲಿಲ್ಲ. ಯಾರು ಬಡಬಗ್ಗರು ಇದ್ದಾರೆ, ದೀನದಲಿತರು ಇದ್ದಾರೆ.

ಅವರಿಗೆ ಅದನ್ನು ದಾನವಾಗಿ ಕೊಡುವಂತಹ ಕೆಲಸವನ್ನು ಪ್ರತಿ ತಿಂಗಳು ಮಾಡುತ್ತಿದ್ದರು. ಮತ್ತು ಒಂದೊಂದು ಸಲ ಅವರ ಕಡೆಗೆ ಯಾರೂ ದಾನಕ್ಕೆ ಹೋಗದಿದ್ದರೆ ನಮ್ಮಂಥಹವರಿಗೆ ಹೇಳಿ ಯಾರಾದರೂ ಇದ್ದರೆ ನಮ್ಮ ಕಡೆಗೆ ಕಳುಹಿಸಿ ಕೊಡಿ ಎನ್ನುವಂತಹದನ್ನು ಹೇಳಿ ನಮ್ಮ ಮುಖಾಂತರ ಕೊಡಿಸುತ್ತಿದ್ದರು. ಈ ರೀತಿ ಒಂದು ಧೀಮಂತಿಕೆ, ಈ ರೀತಿ ಆದಂತಹ ಒಂದು ವಿಶಾಲ ಮನೋಭಾವನೆ ನಮ್ಮ ರಾಜಕಾರಣದಲ್ಲಿ ಬರಬೇಕಾಗಿದೆ. ಈ ರೀತಿ ಒಂದು ಪ್ರಾಮಾಣಿಕ ಒಬ್ಬ ಆದರ್ಶ ರಾಜಕಾರಣ ಏನು ಇದ್ದಾರೆ, ಅಂತಹವರ ವ್ಯಕ್ತಿತ್ವವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮುಖಾಂತರ ನಾವೆಲ್ಲರೂ ಅವರ ಒಂದು ಆತ್ಮಕ್ಕೆ ಶಾಂತಿಯನ್ನು ಕೋರಲಿಕ್ಕೆ ಸಾಧ್ಯ ಇದೆ. ಆ ದಿಸೆಯಲ್ಲಿ ನಾವೆಲ್ಲ ಪ್ರಯತ್ನ ಮಾಡೋಣ ಎನ್ನುವಂತಹ ಮಾತನ್ನು ಹೇಳಿ ಇವತ್ತು ಅವರ ಅಗಲಿಕೆಯಿಂದ ಆ ಭಾಗದ ಮತ್ತು ಉತ್ತರ ಕರ್ನಾಟಕ ಮತ್ತು ಇಡೀ ಕರ್ನಾಟಕ ರಾಜಕೀಯ ರಂಗಕ್ಕೆ ಒಂದು ಕೊರತೆ ಉಂಟಾಗಿದೆ. ಅದನ್ನು ತುಂಬುವಂತಹ ಶಕ್ತಿಯನ್ನು ಕೊಡಲಿ. ಶಕ್ತಿಯನ್ನು ಆ ಕುಟುಂಬದವರಿಗೆ ಕೊಡಲಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

†**ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ)** : ಮಾನ್ಯ ಅಧ್ಯಕ್ಷರೆ, ಮಾನ್ಯ ಜರತಾರಘರವರ ಜೊತೆಯಲ್ಲಿ ಗದಗೆನ ಉಪ ಚುನಾವಣೆಯಲ್ಲಿ ಭಾಗವಹಿಸುವಂತಹ ಅವಕಾಶ ನನಗೆ ಸಿಕ್ಕಿತು. ಆ ಚುನಾವಣಾ ಸಂಘರ್ಷದಲ್ಲಿ ನಾನೂ ಅವರು ಆಕಸ್ಮಿಕವಾಗಿ ಕೆಲವು ದಿವಸ ಆಸ್ಪತ್ರೆಯಲ್ಲಿ ಇರಬೇಕಾಯಿತು. ಹಾಗೆ ಆಸ್ಪತ್ರೆಯಲ್ಲಿ ಒಟ್ಟಿಗೆ ಒಂದೇ ರೂಮಿನಲ್ಲಿ ನಾವು ಇದ್ದೆವು. ಇದ್ದಂತಹ ದಿನಗಳಲ್ಲಿ ಯಾವ ರೀತಿಯ ಸಂಘಟನೆ ಕೆಲಸ, ಯಾವ ರೀತಿ ಬಡವರ ಕೆಲಸ, ಯಾವ ರೀತಿ ಸಮಾಜದ ಕೆಲಸ ಮಾಡಬೇಕು ಎನ್ನುವಂತಹ ಅಂಶಗಳನ್ನು ಪ್ರತಿ ದಿನ ಅವರ ಜೊತೆ ಚರ್ಚೆ ಮಾಡುತ್ತಿರುವಂತಹ ಸಂದರ್ಭದಲ್ಲಿ ನನಗೆ ಅನಿಸುತ್ತದೆ, ನನ್ನ ಜೀವನಕ್ಕೆ ಒಂದು ಮಾರ್ಗದರ್ಶನ ಮಾಡಿದವರು ಜರತಾರಘರ್ ಎಂದು ನಾನು ಈ ಒಂದು ಸಭೆಯಲ್ಲಿ ಇವತ್ತು ನೆನಪು ಮಾಡಿ ಕೊಳ್ಳುವುದಕ್ಕೆ ಇಷ್ಟ ಪಡುತ್ತಿದ್ದೇನ. ಏಕೆಂದರೆ ಈ ರಾಜಕಾರಣದ ವ್ಯವಸ್ಥೆಯಲ್ಲಿ ಕೇವಲ ಅಧಿಕಾರ, ಕುರ್ಚಿ, ಉನ್ನತ ಸ್ಥಾನಗಳಿಗೆ ಹೋಗಲೇ ಬೇಕು ಎನ್ನುವಂತಹ ಒಂದೇ ಒಂದು ಉದ್ದೇಶದಿಂದ ತತ್ವ, ಸಿದ್ಧಾಂತಗಳನ್ನೆಲ್ಲಾ ಬದಿಗೆ ತಳ್ಳಿ, ತಮ್ಮ ಸ್ವಾರ್ಥವನ್ನು ಬೆಳೆಸಿಕೊಳ್ಳುತ್ತಿರುವಂತಹ ವ್ಯಕ್ತಿಗಳಿಗೆ ಇದು ಒಂದು ಆಶ್ಚರ್ಯ ಆಗಿದೆ, ಇಂತಹ ವ್ಯಕ್ತಿ ಇದ್ದರು. ಇಷ್ಟು ಹೊತ್ತಿನವರೆಗೆ ನಮ್ಮ ಜಗದೀಶ ಶೆಟ್ಟರ್ ಅವರು ಹೇಳಿದರು. ಯಾವ ರೀತಿಯಾಗಿ ಅವರು ವೈಯಕ್ತಿಕವಾಗಿ ತಮ್ಮ ಪೆನ್‌ಷನ್ ಹಣವನ್ನು ಸಾಮಾಜಿಕ ಕೆಲಸಕ್ಕೆ ಬಳಸುತ್ತಿದ್ದರು ಎಂದು ಅವರು ಹೇಳಿದರು ; ಈ ರೀತಿ ಪ್ರತಿ ಒಂದು ಘಟನೆಯಲ್ಲೂ ಕೂಡ, ಅವರು ಇದ್ದಂತಹ ಸಂದರ್ಭದಲ್ಲಿ ನನ್ನ ಜೀವನಕ್ಕೆ

ಒಂದು ರೀತಿಯ ಮಾರ್ಗದರ್ಶನ ಮಾಡಿದಂತಹ ಒಬ್ಬ ವ್ಯಕ್ತಿಯನ್ನು ನಾನು ಕಳೆದುಕೊಂಡಿದ್ದೇನೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಜರತಾರಘರ್ ಅವರಿಂದ ಒಂದು ನಮ್ಮ ಪಕ್ಷದ ಸಂಘಟನೆಗೆ ತುಂಬಾ ನಷ್ಟ ಆಗಿದೆ, ಸಮಾಜಕ್ಕೆ ಮಾರ್ಗದರ್ಶನ ಮಾಡುವಂತಹ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡ ಹಾಗಾಗಿದೆ. ಇಡೀ ರಾಜ್ಯದ ಜನರ ದೃಷ್ಟಿಯಿಂದ ಒಬ್ಬ ಸಮಾಜ ಸೇವಕನನ್ನೂ ಕೂಡ ಕಳೆದುಕೊಂಡಂತಾಗಿದೆ ಎಂದು ತುಂಬಾ ನೊಂದು ಜರತಾರಘರ ಅವರ ಕುಟುಂಬಕ್ಕೆ ಪರಮಾತ್ಮ ಒಂದು ಶಾಂತಿಯನ್ನು ಕೊಡಲಿ ಎಂದು. ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಜರತಾರಘರ್ ಅವರ ನಿಧನಕ್ಕೆ ತಾವೇನು ಸಂತಾಪ ಸೂಚನೆಯನ್ನು ಈ ಸಭೆಯಲ್ಲಿ ಮಂಡಿಸಿದ್ದೀರಿ, ನಾನೂ ಕೂಡ ಆ ಬಗ್ಗೆ ಅನುಮೋದಿಸುತ್ತಾ ಸಜ್ಜನ ರಾಜಕಾರಣಿಗಳು ಕಡಿಮೆ ಆಗಿರುವ ಈ ಕಾಲದಲ್ಲಿ ಅವರಂತಹ ಅನೇಕ ಜನ ರಾಜಕಾರಣಕ್ಕೆ ಬರಲಿ. ಅವರು ಬಿಜೆಪಿಯಿಂದಲಾದರೂ ಬರಲಿ, ಆರ್‌ಎಸ್‌ಎಸ್‌ನಿಂದಲಾದರೂ ಬರಲಿ ಬೇರೆ ಎಲ್ಲಿಂದಲಾದರೂ ಬರಲಿ. ಈ ಸಭೆ ಅಂಥವರಿಂದ ಹೆಚ್ಚು ಶ್ರೀಮಂತನಾಗಲಿ ಎಂದು ಹೇಳಿ ಆಶಿಸಿ ಅವರ ಮನೆಯವರಿಗೆ ಈ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತ ಕೊಡಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕ ಸಂತಾಪ ನಿರ್ಣಯವನ್ನು ಬೆಂಬಲಿಸಿ ಒಬ್ಬ ಮಹಾನ್ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಈ ರಾಜ್ಯದಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಹುಬ್ಬಳ್ಳಿ–ಧಾರವಾಡದಲ್ಲಿ ಅವರು ನಡೆಸಿದಂತಹ ಸಂಘಟನೆಗಳು, ಮಾಡಿದಂತಹ ಹೋರಾಟಗಳು, ಅವರು ತೆಗೆದುಕೊಂಡಿರುವಂತಹ ನಿರ್ಧಾರಗಳು ಆದರ್ಶವಾಗಿರತಕ್ಕಂಥಹದು. ಅವರ ಅಗಲಿಕೆಯಿಂದ ಕರ್ನಾಟಕ ರಾಜ್ಯಕ್ಕೆ ತುಂಬಲಾರದ ನಷ್ಟ ಆಗಿದೆ, ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ತಮ್ಮ ನಿರ್ಣಯವನ್ನು ನಾನು ಬೆಂಬಲಿಸುತ್ತಿದ್ದೇನೆ.

ಶ್ರೀ ಜೆ.ವಿ. ಶ್ರೀರಾಮ ರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಜರತಾರಘರ್ ಅವರು ಈ ಸದನದ ಸದಸ್ಯರಾಗಿದ್ದಂಥವರು ಮತ್ತು ಸಾರ್ವಜನಿಕ ಜೀವನದಲ್ಲಿ ತಮ್ಮದೇ ಆದಂತಹ ಮೌಲ್ಯಗಳನ್ನು ಎತ್ತಿ ಹಿಡಿದಂತಹ ಅವರು ತೀರಿಕೊಂಡಿದ್ದಾರೆ. ಅಂತಹವರ ಸಂಖ್ಯೆ ಇವತ್ತು ಸಾರ್ವಜನಿಕ ಜೀವನದಲ್ಲಿ ಬಹಳ ಕಡಿಮೆ ಆಗುತ್ತಿದೆ. ಹಾಗಾಗಿ ಸಾರ್ವಜನಿಕ ಜೀವನಕ್ಕೆ ಅದೊಂದು ತುಂಬಲಾರದಂತಹ ನಷ್ಟ ಆಗಿದೆ ಎನ್ನುವಂತಹ ವಿಚಾರವನ್ನು ಹೇಳಿ ನಾನು ಮಾನ್ಯ ಮುಖ್ಯಮಂತ್ರಿಗಳು ಏನು ನಿರ್ಣಯವನ್ನು ಮಂಡಿಸಿದ್ದಾರೆ. ಅದನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು ; ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು :

ಅ) ವಿಷಯ : ಪಡಿತರ ಚೀಟಿ ಹಂಚಿಕೆಯಲ್ಲಾಗಿರುವ ಅವ್ಯವಹಾರ.

†ಶ್ರೀ ಬಿ.ಎಸ್. ಯಡಿಯೂರಪ್ಪ : (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾಗಿ ಈ ಸದನದಲ್ಲಿರುವ 224 ಶಾಸಕರಿಗೆ ಸಂಬಂಧಪಟ್ಟ ಒಂದು ಸಾರ್ವಜನಿಕ ಮಹತ್ವದ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ಪ್ರಸ್ತಾಪಿಸಲು ಎದ್ದು ನಿಂತಿದ್ದೇನೆ. ಬಹುಶಃ ನಮ್ಮ ಮುಖ್ಯಮಂತ್ರಿಗಳಿಗಾಗಲಿ, ಉಪ ಮುಖ್ಯಮಂತ್ರಿಗಳಾಗಲಿ ಈ ಸರ್ಕಾರಿ ಆಜ್ಞೆ ಗಮನಕ್ಕೆ ಬಂದಿಲ್ಲವೆಂದು ನಾಮ ತಿಳಿದುಕೊಂಡಿದ್ದೇನೆ. ಅಕಸ್ಮಾತ್ ಇದು ಗೊತ್ತಿದ್ದೂ ನಿಮ್ಮ ಅನುಮತಿಯೊಂದಿಗೆ ಇದೇನಾದರೂ ಆಗಿದ್ದರೆ ಇದೊಂದು ಅಕ್ಷಮ್ಯ ಅಪರಾಧ, ಜನರು ನಮ್ಮನ್ನು ಕ್ಷಮಿಸುವುದಿಲ್ಲ ಅಂದರೆ, ನಮ್ಮ ರಾಜ್ಯದಲ್ಲಿ 16 ಲಕ್ಷ ಹಸಿರು ಕಾರ್ಡು ಹೊಂದಿರುವ ಕಡು ಬಡವರಿಗೆ ಹಳದಿ ಕಾರ್ಡುಗಳು ಇಲ್ಲದ ಕಾರಣದಿಂದ ಹಳದಿ ಕಾರ್ಡನ್ನು ಕೊಡುವುದಕ್ಕಾಗಲಿಲ್ಲ. ಅದಕ್ಕೋಸ್ಕರ ಸರ್ಕಾರ ಆ ಸಂದರ್ಭದಲ್ಲಿ 16 ಲಕ್ಷ ಕುಟುಂಬದವರಿಗೆ Identity stip ಕೊಟ್ಟು ಕಳೆದ ನಾಲ್ಕೈದು ತಿಂಗಳುಗಳಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಪಡಿತರ ವ್ಯವಸ್ಥೆಯಡಿ ಅಕ್ಕಿ, ಗೋಧಿ ಪಡೆದುಕೊಳ್ಳಲು ವ್ಯವಸ್ಥೆಯಡಿ ಅಕ್ಕಿ, ಗೋಧಿ, ಸಕ್ಕರೆ ಸಿಗುವುದಿಲ್ಲವೆಂದು ಹಾಹಾಕಾರವೆದ್ದಿದೆ. ಇವೊತ್ತು ಸಾವಿರಾರು ಜನರು ಇಲ್ಲಿಗೆ ಬಂದಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಿಷ್ಟೇ ಇವೊತ್ತು 16 ಲಕ್ಷ ಬಡ ಕುಟುಂಬ ಎಂದರೆ, 1 ಕೋಟಿ ಜನಸಂಖ್ಯೆಗೆ ಸಂಬಂಧಪಟ್ಟಂತೆ ಪಡಿತರದ ತಾತ್ಕಾಲಿಕ ವ್ಯವಸ್ಥೆಯನ್ನು ರದ್ದುಗೊಳಿಸಿದ ಪರಿಣಾಮ ಏನಾಗಿದೆ ಎಂಬುದನ್ನು ಹೇಳುತ್ತೇನೆ. ಇದನ್ನು ಕೊಟ್ಟದ್ದು ಏಕೆ ? ವಾಪಸ್ಸು ಪಡೆದದ್ದು ಏಕೆ ? ಇಲ್ಲಿಗೆ ಆರಿಸಿ ಬಂದಿರುವ 224 ಜನರು ಒಂದಲ್ಲ ಒಂದು ರೀತಿಯಿಂದ ಅವರ ಬೆಂಬಲ ಪಡೆದು ಶಾಸಕರಾಗಿ ಬಂದ ತಕ್ಷಣ ಜನತಾ ದಳ (ಎಸ್) ಪ್ರಣಾಳಿಕೆ ಪ್ರಕಾರ ಕಿಲೋಗೆ ರೂ. 3 ರಿಂದ 3.50ರವರೆಗೆ ಅಕ್ಕಿ ಒದಗಿಸಿಕೊಡುತ್ತೀರೆಂದು ನಾವು ಕಾಯುತ್ತಿರುವ ಸಮಯದಲ್ಲಿ 16 ಲಕ್ಷ ಕುಟುಂಬಕ್ಕೆ ಅನ್ಯಾಯ ಮಾಡುವಂಥ ಕೆಲಸ ಮಾಡಿದ್ದೀರಿ. ಯಾವುದೇ ಒಂದು ಸರ್ಕಾರವಾಗಲಿ, ಒಂದು ಸರ್ಕಾರವೆಂದರೆ ಆಹಾರ ಭದ್ರತೆ, ಸಾಮಾಜಿಕ ಭದ್ರತೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವುದು ಒಂದು ಸರ್ಕಾರದ ಜವಾಬ್ದಾರಿಯೆಂದು ನಾನು ತಿಳಿದುಕೊಂಡಿದ್ದೇನೆ. ದಯಮಾಡಿ ನಾನು ನಿಮ್ಮ